26) ಆಶಾ ಕಾರ್ಯಕರ್ತೆಯರು ಕೆಲಸ ನಿರ್ವಹಿಸುವ ಕ್ಷೇತ್ರ ಮಟ್ಟದಿಂದ ಫಲಾನುಭವಿಗಳನ್ನು ಪ್ರಾ. ಆ ಕೇಂದ್ರ/ ಸ. ಆ ಕೇಂದ್ರ / ಆಸ್ಪತ್ರೆಗಳಿಗೆ ಕರೆದೊಯ್ಯಲು ಪ್ರಯಾಣ ಭತ್ಯೆಯಾಗಿ ಪ್ರತಿ ತಿಂಗಳು 200 ರೂ. ಗಳಂತೆ ನೀಡುವುದು – ರೂ 200/–

ಶೂನ್ಯ ಬಡ್ಡಿದರ ಸಾಲ

542 (695) ಶ್ರೀ ಯು.ಟಿ. ಖಾದರ್ (ಮಂಗಳೂರು) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:–

ಅ) ರಾಜ್ಯದಲ್ಲಿನ ರೈತರಿಗೆ ಶೂನ್ಯ ಬಡ್ಡಿದರದಲ್ಲಿ ಸಾಲ ಪಡೆಯಲು ರೂಪಿಸಿರುವ ಮಾನದಂಡಗಳೇನು;

ಆ) ಈ ಯೋಜನೆಯಡಿ ಇದುವರೆವಿಗೂ ಎಷ್ಟು ರೈತರು ಇದರ ಪ್ರಯೋಜನ ಪಡೆದಿರುತ್ತಾರೆ; ಮರುಪಾವತಿಯಲ್ಲಿ ಸಾಧಿಸಿರುವ ಪ್ರಗತಿ ಎಷ್ಟು?

ಶ್ರೀ ಜಗದೀಶ ಶೆಟ್ಟರ್ (ಮುಖ್ಯಮಂತ್ರಿಯವರು) :

ಅ) ರಾಜ್ಯದಲ್ಲಿನ ರೈತರಿಗೆ ಶೂನ್ಯ ಬಡ್ಡಿದರದಲ್ಲಿ ಸಾಲ ಪಡೆಯಲು ರೂಪಿಸಿರುವ ಮಾನದಂಡಗಳು ಈ ಕೆಳಗಿನಂತಿರುತ್ತವೆ.

1. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ, ಪ್ರಾಥಮಿಕ ಕೃಷಿ ಪತ್ತಿನ ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ಮತ್ತು ಅರ್ಬನ್ ಬ್ಯಾಂಕುಗಳ ಮೂಲಕ ರಾಜ್ಯದ ರೈತರು ಅಲ್ಪಾವಧಿ ಬೆಳೆ ಸಾಲವನ್ನು ಪಡೆದಿರಬೇಕು.
2. ದಿನಾಂಕ: 01–04–2012 ರಿಂದ ಪಡೆದಂತಹ ಅಲ್ಪವಧಿ ಬೆಳೆ ಸಾಲಗಳಿಗೆ ಮಾತ್ರ ಯೋಜನೆಯು ಅನ್ವಯವಾಗುತ್ತದೆ.
3. ರೂ.1.00 ಲಕ್ಷದವರೆಗೆ ಪಡೆದಂತಹ ಸಾಲಗಳಿಗೆ ಮಾತ್ರ ಶೂನ್ಯ ಬಡ್ಡಿ ದರವು ಅನ್ವಯವಾಗುತ್ತದೆ.

ಆ) ಏಪ್ರಿಲ್ 2012 ರಿಂದ ಅಕ್ಟೋಬರ್ 2012ರ ವರೆಗೆ ಶೂನ್ಯ ಬಡ್ಡಿ ದರದಲ್ಲಿ 788981 ರೈತರು ರೂ.2443.24 ಕೋಟಿಗಳ ಸಾಲವನ್ನು ಪಡೆದಿರುತ್ತಾರೆ. ಶೂನ್ಯ ಬಡ್ಡಿದರದಲ್ಲಿ ವಿತರಿಸಿದ ಸಾಲಗಳಿಗೆ ಮರುಪಾವತಿ ಅವಧಿ ದಿನಾಂಕ: 01–04–2013 ರಿಂದ ಪ್ರಾರಂಭವಾಗುತ್ತದೆ.